# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ನರಶಿಂಗ ತಮ್ಮಣ್ಣಾ ಉಗಾರೆ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ ಮಹಾದೇವ ನಿಂಗಪ್ಪಾ ಬುರ್ಲಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಜಂಬಗಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. Compt/UPLOK/BGM/872/2013/PP, ದಿನಾಂಕ:04.03.2017

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿನ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 16.02.2017 .ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಸಿದ್ದಪ್ಪ ಅಮ್ಮಣ್ಣ ಮೆಂಡಿಗೇರಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿ, ಜಂಬಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಣಮಾಪುರ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಂಬಗಿ ರಸ್ತೆಯಿಂದ ಕೆಂಪವಾಡೆ ತೋಟದವರೆಗೆ ರಸ್ತೆಯನ್ನು ನಿರ್ಮಿಸಿದ್ದು, ಸದರಿ ಕಾಮಗಾರಿಯನ್ನು ಯಂತ್ರಗಳನ್ನು ಉಪಯೋಗಿಸಿ ಅನುಷ್ಠಾನಗೊಳಿಸಲಾಗಿರುತ್ತದೆ ಹಾಗೂ 2010-11 ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಅನುಕೂಲಸ್ಥರಾದ ಶ್ರೀಮತಿ ರೇಣುಕಾ ಕಲಗೊಂಡ ಪಾಟೀಲ, ಶ್ರೀಮತಿ ಶಾಲಾ ಮುರಿಗೆಪ್ಪ ಮಜ್ಜಗಿ, ಶ್ರೀಮತಿ ಚಂದ್ರವ್ವ ಅಣ್ಣಪ್ಪ ರೋಗಿ, ಶ್ರೀಮತಿ ಅಕ್ಕವ್ವ ಗಂಗಣ್ಣ ರೋಗಿ, ಶ್ರೀಮತಿ ಅಶ್ವಿನಿ ವಿಠಲ ರೋಗಿ, ಶ್ರೀಮತಿ ಮುಕ್ತಾಬಾಯಿ ಕಲ್ಲಪ್ಪ ರೋಗಿ, ಶ್ರೀಮತಿ ಶೀಲಕ್ಕ ವಿಠಲ ಮಜ್ಜಗಿ, ಶ್ರೀಮತಿ ಶೋಭಾ ನಾಗಪ್ಪ ಐನಾಪೂರೆ ಇವರುಗಳಿಗೆ ಮನೆಗಳನ್ನು ಮಂಜೂರು ಮಾಡಿದ್ದು ಇವರುಗಳ ವಿರುದ್ಧ ಕ್ರಮ ಜರುಗಿಸುವಂತೆ ಕೋರಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರದಡಿ ತನಿಖೆ ಕೈಗೊಳ್ಳಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸದೆ ಇರುವುದರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕೋರಿಕೆ ಅರ್ಜಿ ಪ್ರತಿಯನ್ನಾಗಲೀ ಹಾಗೂ ಕೂಲಿಕಾರರು ಎಷ್ಟು ದಿನಗಳ ಕೂಲಿ ಬೇಕೆಂದು ಕೋರಿರುವ ಬಗ್ಗೆ ದಾಖಲೆ ಹಾಜರುಪಡಿಸಿದೆ ಇರುವುದರಿಂದ ಹಾಗು ವಸತಿ ಯೋಜನೆಯಡಿಯಲ್ಲಿ ಅರ್ಹ ಫಲಾನುವಿಗಳು ವಸತಿ ಸೌಲಭ್ಯದಿಂದ ವಂಚಿತರಾಗಿರುವುದು ಸ್ಪಷ್ಟಪಡುವುದರಿಂದ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ(ನಡತೆ) ನಿಯಮ 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರುಗಳಾದ ಶ್ರೀ ನರಶಿಂಗ ತಮ್ಮಣ್ಣಾ ಉಗಾರೆ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ ಮಹಾದೇವ ನಿಂಗಪ್ಪಾ ಬುರ್ಲಿ, ಜಂಬಗಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡು ಬಂದಿದ್ದರಿಂದ, ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14(ಎ) ರಡಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಎದುರುದಾರರುಗಳಾದ ಶ್ರೀ ನರಶಿಂಗ ತಮ್ಮಣ್ಣಾ ಉಗಾರೆ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ ಮಹಾದೇವ ನಿಂಗಪ್ಪಾ ಬುರ್ಲಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಜಂಬಗಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 213 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 20.03.2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ನರಶಿಂಗ ತಮ್ಮಣ್ಣಾ ಉಗಾರೆ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ ಮಹಾದೇವ ನಿಂಗಪ್ಪಾ ಬುರ್ಲಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಜಂಬಗಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ–8 ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ವಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
   (ಮೇಲೆ ಓದಲಾದ ಪತ್ರದಲ್ಲಿ ಸಲ್ಲಿಸಲಾದ ಮೂಲ ದಾಖಲಾತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
5) ಕಾರ್ಯನಿರ್ವಾಹಕ ಅಧಿಕಾರಿ, ಅಥಣಿ ತಾಲ್ಲೂಕು ಪಂಚಾಯತಿ, ಅಥಣಿ, ಬೆಳಗಾವಿ ಜಿಲ್ಲೆ.
   (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಲು ಅಗತ್ಯ ಕ್ರಮವಹಿಸುವುದು.)
6) ಶ್ರೀ ನರಶಿಂಗ ತಮ್ಮಣ್ಣಾ ಉಗಾರೆ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಂಬಗಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
7) ಶ್ರೀ ಮಹಾದೇವ ನಿಂಗಪ್ಪಾ ಬುರ್ಲಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಜಂಬಗಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
8) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.